NATIONAL
DAIRY
DEVELOPMENT
BOARD

# ಜಾನುವಾರುಗಳಲ್ಲಿ ಕಾಣಿಸುವ ಪ್ರಮುಖ ರೋಗಗಳಿಗೆ ಪಾರಂಪರಿಕ ಪಶುವೈದ್ಯಕೀಯ ಔಷದಿ (ನಾಟಿ ಮದ್ದು)













TDU
INSTITUTE OF TRANSDISCIPLINARY HEALTH SCIENCES & TECHNOLOGY

# ಕೆಚ್ಚಲುಬಾವು (ಎಲ್ಲಾ ವಿಧಗಳು/ ರೀತಿ)



ಲೋಳೆಸರ





ಅರಿಶಿನ



ನಿಂಬೆಹಣ್ಣು



ಸುಣ್ಣ

## <u>ಜಲ ಆಧಾರಿತ ಉಪಚಾರ</u>

### ಬೇಕಾಗುವ ಪದಾರ್ಥಗಳು

ಒಂದು ದಿನದ ಔಷಧಿಗೆ ಬೇಕಾದ ಪ್ರಮಾಣ

ಲೋಳೆಸರ (ಒಂದು ಪೂರ್ತಿ ಎಲೆ) - **250** ಗ್ರಾಂ; ಅರಿಶಿನ ಪುಡಿ - **50** ಗ್ರಾಂ; ಸುಣ್ಣ - **15** ಗ್ರಾಂ. ಮತ್ತು ನಿಂಬೆ ಹಣ್ಣು- **6**

### ತಯಾರಿಸುವ ವಿಧಾನ

(i) ಲೋಳೆಸರದ ಪೂರ್ತಿ ಎಲೆಯಿಂದ ಮುಳ್ಳನ್ನು ತೆಗೆದು ಎಲೆಯನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಕತ್ತರಿಸಿರಿ

(ii) ಅರಿಶಿನ ಪುಡಿ ಮತ್ತು ಸುಣ್ಣದೊಂದಿಗೆ ಅರೆದು ಕೆಂಪು ಬಣ್ಣದ ಪೇಸ್ಟ್ ತಯಾರಿಸಿರಿ

### ಔಷಧಿ ನೀಡುವ ಕ್ರಮ

(i) ಕೆಚ್ಚಲುಗಳನ್ನು ಚೆನ್ನಾಗಿ ತೊಳೆದು, ಶುಭ್ರವಾಗಿಸಿ, ಒಣಗಲು ಬಿಡಿ. ಕೆಚ್ಚಲಿನ ಎಲ್ಲಾ ಭಾಗದಿಂದ (ಆರೋಗ್ಯಕರವಾಗಿರುವ ಭಾಗದಿಂದ ಕೂಡ) ಪೂರ್ತಿಯಾಗಿ ಹಾಲನ್ನು ಕರೆದು ಕೆಚ್ಚಲನ್ನು ಬರಿದು ಮಾಡಿ

(ii) ಒಂದು ಹಿಡಿಯಷ್ಟು ಪೇಸ್ಟಿಗೆ **200** ಮಿ. ಲಿ. ನೀರು ಬೆರೆಸಿ ತೆಳ್ಳಗೆ ಮಾಡಿರಿ.

(iii) ನೀರು ಬೆರೆಸಿದ ಈ ಪೇಸ್ಟನ್ನು ಪ್ರತಿದಿನ **10** ಬಾರಿಯಂತೆ ಐದು ದಿನ ಪಶುವಿನ ಕೆಚ್ಚಲಿಗೆ ಲೇಪಿಸಿರಿ. ಔಷಧಿ ಹಚ್ಚುವ ಮೊದಲು ಮೇಲಿನ (ಕ್ರಮ. ಸಂ. **1**) ಕ್ರಮವನ್ನು ಮಾಡಬೇಕು.

(v) ನಿಂಬೆ ಹಣ್ಣನ್ನು (ಸರಿಸಮಾನವಾಗಿ ಕತ್ತರಿಸಿ) ಪ್ರತಿದಿನ ಮೂರು ಬಾರಿಯಂತೆ, ಮೂರು ದಿವಸ ತಿನ್ನಿಸಿರಿ

(iv) ದಿನದ ಕೊನೆಯಲ್ಲಿ ಎಣ್ಣೆ ಆಧಾರಿತ ಮಿಶ್ರಣವನ್ನು ಲೇಪಿಸಿ


ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಕೆಚ್ಚಲುಬಾವು (ಎಲ್ಲಾ ವಿಧಗಳು/ ರೀತಿ)



ಲೋಳೆಸರ
(ಪೂರ್ತಿ ಎಲೆ)





ಸಾಸಿವೆ ಅಥವಾ
ಎಳ್ಳಿನ ಎಣ್ಣೆ



ನಿಂಬೆ ಹಣ್ಣು



ಸುಣ್ಣ



ಅರಿಶಿನ ಪುಡಿ

## ತೈಲ ಆಧಾರಿತ ಉಪಚಾರ

### ಬೇಕಾಗುವ ಪದಾರ್ಥಗಳು

ಒಂದು ದಿನದ ಔಷಧಿಗೆ ಬೇಕಾದ ಪ್ರಮಾಣ

ಲೋಳೆಸರ (ಒಂದು ಪೂರ್ತಿ ಎಲೆ) - **250** ಗ್ರಾಂ; ಅರಿಶಿನ ಪುಡಿ - **50** ಗ್ರಾಂ;
ಸುಣ್ಣ - **15** ಗ್ರಾಂ. ಮತ್ತು ನಿಂಬೆ ಹಣ್ಣು- **6**; ಸಾಸಿವೆ ಅಥವಾ ಎಳ್ಳಿನ ಎಣ್ಣೆ- **600** ಮಿ. ಲಿ.

### ತಯಾರಿಸುವ ವಿಧಾನ

(i) ಲೋಳೆಸರದ ಪೂರ್ತಿ ಎಲೆಯಿಂದ ಮುಳ್ಳನ್ನು ತೆಗೆದು ಎಲೆಯನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಕತ್ತರಿಸಿರಿ

(ii) ಅರಿಶಿನ ಪುಡಿ ಮತ್ತು ಸುಣ್ಣದೊಂದಿಗೆ ಅರೆದು ಕೆಂಪು ಬಣ್ಣದ ಪೇಸ್ಟ್ ತಯಾರಿಸಿರಿ

### ಔಷಧಿ ನೀಡುವ ಕ್ರಮ

(i) ಕೆಚ್ಚಲುಗಳನ್ನು ಚೆನ್ನಾಗಿ ತೊಳೆದು, ಶುಭ್ರವಾಗಿಸಿ, ಒಣಗಲು ಬಿಡಿ. ಕೆಚ್ಚಲಿನ ಎಲ್ಲಾ ಭಾಗದಿಂದ (ಆರೋಗ್ಯಕರವಾಗಿರುವ ಭಾಗದಿಂದ ಕೂಡ) ಪೂರ್ತಿಯಾಗಿ ಹಾಲನ್ನು ಕರೆದು ಕೆಚ್ಚಲನ್ನು ಬರಿದು ಮಾಡಿ.

(ii) ಒಂದು ಹಿಡಿಯಷ್ಟು ಪೇಸ್ಟಿಗೆ **200** ಮಿ. ಲಿ. ಸಾಸಿವೆ ಅಥವಾ ಎಳ್ಳಿನ ಎಣ್ಣೆ ಬೆರೆಸಿ ತೆಳ್ಳಗೆ ಮಾಡಿರಿ.

(iii) ಎಣ್ಣೆಯಲ್ಲಿ ಬೆರೆಸಿದ ಈ ಪೇಸ್ಟನ್ನು ಪ್ರತಿದಿನ ಮೂರು ಬಾರಿಯಂತೆ ಐದು ದಿನ ಪಶುವಿನ ಕೆಚ್ಚಲಿಗೆ ಲೇಪಿಸಿರಿ. ಔಷಧಿ ಹಚ್ಚುವ ಮೊದಲು ಮೇಲಿನ (ಕ್ರಮ. ಸಂ. 1) ಕ್ರಮವನ್ನು ಮಾಡಬೇಕು.

(iv) ನಿಂಬೆ ಹಣ್ಣನ್ನು (ಸರಿಸಮಾನವಾಗಿ ಅರ್ಧಕ್ಕೆ ಕತ್ತರಿಸಿದ) ಪ್ರತಿದಿನ ಮೂರು ಬಾರಿಯಂತೆ, ಮೂರು ದಿವಸ ತಿನ್ನಿಸಿರಿ

ವಿಡಿಯೊವನ್ನು ವೀಕ್ಷಿಸಲು ಈ ಕ್ಯು. ಆರ್.
ಕೋಡನ್ನು ಸ್ಕ್ಯಾನ್ ಮಾಡಿ

# ಮೊಲೆದ್ವಾರ ಮುಚ್ಚಿ ಹೋಗಿರುವುದು



ಬೇವಿನೆಲೆಯ ಕಡ್ಡಿ





ಅರಿಶಿನ

ಬೆಣ್ಣೆ



ಅಥವಾ



ತುಪ್ಪ

## ಬೇಕಾಗುವ ಪದಾರ್ಥಗಳು:

ತಾಜ ಹಾಗು ಶುಚಿಗೊಳಿಸಿದ ಬೇವಿನೆಲೆಯ ಕಡ್ಡಿ-1
ಅರಿಶಿನ ಪುಡಿ; ಬೆಣ್ಣೆ ಅಥವಾ ತುಪ್ಪ

## ತಯಾರಿಸುವ ವಿಧಾನ

ಬೇವಿನೆಲೆಯ ಕಡ್ಡಿಯನ್ನು ಕೆಚ್ಚಲುತೊಟ್ಟಿನ ಅಳತೆಗೆ ಅನುಸಾರವಾಗಿ ಕತ್ತರಿಸಿಕೊಳ್ಳಿ ಮತ್ತು ತುದಿಯನ್ನು ಹಾಗೆ ಉಳಿಸಿಕೊಳ್ಳಿರಿ. ಅರಿಶಿನ ಪುಡಿ, ಬೆಣ್ಣೆ ಅಥವಾ ತುಪ್ಪದ ಮಿಶ್ರಣವನ್ನು ಬೇವಿನ ಎಲೆಯ ಕಡ್ಡಿಗೆ ಚೆನ್ನಾಗಿ ಹಚ್ಚಿ. ಮುಚ್ಚಿಕೊಂಡಿರುವ ಮೊಲೆತೊಟ್ಟಿನ ರಂಧ್ರವನ್ನು ಚೆನ್ನಾಗಿ ತೊಳೆಯಿರಿ

## ಔಷಧಿ ನೀಡುವ ಕ್ರಮ

ಮಿಶ್ರಣ ಲೇಪಿಸಿದ ಬೇವಿನ ಕಡ್ಡಿಯನ್ನು ಬಾಧಿತ ಮೊಲೆತೊಟ್ಟಿನ ಒಳಗೆ ಅಪ್ರದಕ್ಷಿಣೆಯಾಗಿ (ಗಡಿಯಾರ ಹಿಂದಕ್ಕೆ ನಡೆಯುವ ಮಾದರಿಯಲ್ಲಿ) ತಿರುಗಿಸುತ್ತಾ ಮೊಲೆತೊಟ್ಟಿನ ರಂಧ್ರದ ಒಳಗೆ ಸೇರಿಸಿರಿ

ಪ್ರತಿ ಸಾರಿ ಹಾಲು ಕರೆದ ನಂತರ ಈ ಕ್ರಿಯೆಯನ್ನು ಮತ್ತೊಂದು ತಾಜ ಕಡ್ಡಿಯಿಂದಲೇ ಮಾಡ ಬೇಕು

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಕೆಚ್ಚಲು ಊತ



ಸಾಸಿವೆ
ಅಥವಾ
ಎಳ್ಳಿನ ಎಣ್ಣೆ





ಅರಿಶಿನ



ಬೆಳ್ಳುಳ್ಳಿ

## ಬೇಕಾಗುವ ಪದಾರ್ಥಗಳು: ಒಂದು ಸಲದ ಔಷಧಿಗೆ ಬೇಕಾದ ಪ್ರಮಾಣ

ಎಳ್ಳೆಣ್ಣೆ ಅಥವಾ ಸಾಸಿವೆ ಎಣ್ಣೆ- 200 ಮಿ.ಲಿ.

ಅರಿಶಿನ ಪುಡಿ- ಒಂದು ಹಿಡಿ

ಬೆಳ್ಳುಳ್ಳಿ- 2 ಎಸಳು

## ತಯಾರಿಸುವ ವಿಧಾನ

ಎಣ್ಣೆಯನ್ನು ಬಿಸಿಮಾಡಿ ಅದಕ್ಕೆ ಅರಿಶಿನ ಪುಡಿ ಹಾಗೂ ಕತ್ತರಿಸಿದ ಬೆಳ್ಳುಳ್ಳಿಯನ್ನು ಹಾಕಿ ಚೆನ್ನಾಗಿ ಬೆರೆಸಿ, ಸ್ವಲ್ಪ ಘಮ ಬರುವವರೆಗೂ ಬಿಸಿಮಾಡಿ(ಕುದಿಸುವ ಅಗತ್ಯವಿಲ್ಲ) ತಣ್ಣಗಾಗಲು ಬಿಡಿ

## ಔಷಧಿ ನೀಡುವ ಕ್ರಮ

ವೃತ್ತಾಕಾರದಲ್ಲಿ ಸ್ವಲ್ಪ ಬಲವಾಗಿ ಸವರುತ್ತಾ ಊದಿರುವ ಮತ್ತು ಕೆಚ್ಚಲಿನ ಸಂಪೂರ್ಣ ಭಾಗಕ್ಕೆ ಹಚ್ಚಿ. ದಿನಕ್ಕೆ ನಾಲ್ಕು ಬಾರಿಯಂತೆ ಮೂರು ದಿನಗಳವರೆಗೂ ಹಚ್ಚಿ

## ಸೂಚನೆ

ಈ ಮಿಶ್ರಣವನ್ನು ಲೇಪಿಸುವ ಮೊದಲ ಕೆಚ್ಚಲುಬಾವು ಇದೆಯಾ ಎಂದು ಪರೀಕ್ಷಿಸಿ. ಕೆಚ್ಚಲುಬಾವು ಇಲ್ಲದಿದ್ದಲಿ ಮಾತ್ರ ಈ ಔಷಧಿಯನ್ನು ಲೇಪಿಸಿ.

ವಿಡಿಯೊವನ್ನು ವೀಕ್ಷಿಸಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಮಾಸ ಅಥವ ಸೆತ್ತೆ ಬೀಳದಿರುವುದು



ಮೂಲಂಗಿ






ಬೆಂಡೆಕಾಯಿ



ಬೆಲ್ಲ



ಉಪ್ಪು

## ಬೇಕಾಗುವ ಪದಾರ್ಥಗಳು:

ಬಿಳಿಮೂಲಂಗಿ- 1

ಬೆಂಡೆಕಾಯಿ- 1.5 ಕೆ. ಜಿ

ಬೆಲ್ಲ- ಸಾಕಾಗುವಷ್ಟು

ಉಪ್ಪು- ಸಾಕಾಗುವಷ್ಟು

## ತಯಾರಿಸುವ ವಿಧಾನ

ಬೆಂಡೆಕಾಯಿಗಳನ್ನು ಎರಡು ತುಂಡುಗಳನ್ನಾಗಿ ಕತ್ತರಿಸಿಕೊಳ್ಳಿ

## ಔಷಧಿ ನೀಡುವ ಕ್ರಮ

ಕರುಹಾಕಿದ 2 ಗಂಟೆಗಳ ಒಳಗೆ 1 ಮೂಲಂಗಿಯನ್ನು ತಿನ್ನಿಸಿ.

ಕರುಹಾಕಿದ 8 ಗಂಟೆಗಳವರೆಗೂ ಮಾಸ ಅಥವ ಸೆತ್ತೆ ಉಳಿದುಕೊಂಡಿದ್ದರೆ ಬೆಲ್ಲ ಹಾಗೂ ಉಪ್ಪಿನ ಜೊತೆ 1.5 ಕೆ.ಜಿ ಬೆಂಡೆಕಾಯಿಯನ್ನು ನೀಡಿ.

ಮಾಸ ಅಥವ ಸೆತ್ತೆ 12 ಗಂಟೆಯೊಳಗೆ ಬೀಳದಿದ್ದರೆ ಯೋನಿಯ ಸಮೀಪದಲ್ಲಿ ಒಂದು ಗಂಟನ್ನು ಹಾಕಿ, ಗಂಟಿನಿಂದ 2 ಇಂಚಿನಷ್ಟು ಬಿಟ್ಟು ಉಳಿದ ಭಾಗವನ್ನು ಕತ್ತರಿಸಿ. ಮಾಸ ತಾನಾಗಿಯೇ ಒಳಗೆ ಹೋಗುವುದು.

ಕೈಯಿಂದ ಮಾಸ ಅಥವ ಸೆತ್ತೆಯನ್ನು ತೆಗೆಯಲು ಪ್ರಯತ್ನಿಸಬೇಡಿ.

ಮೂಲಂಗಿಯನ್ನು ವಾರಕ್ಕೊಂದರಂತೆ 4 ವಾರ ತಿನ್ನಿಸಿ.

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಬಂಜೆತನ/ ಗರ್ಭಧರಿಸದೇ ಇರುವುದು


ಮೂಲಂಗಿ



ಲೋಳೆಸರ





ಮಂಗರಬಳ್ಳಿ


ನುಗ್ಗೇ ಸೊಪ್ಪು


ಬೆಲ್ಲ


ಕರಿಬೇವು


ಉಪ್ಪು


ಅರಿಶಿನ

## ಔಷಧಿ ನೀಡುವ ಕ್ರಮ

ಬೆದೆಗೆ ಬಂದ ಒಂದು / ಎರಡು ದಿನಗಳಲ್ಲಿ ಚಿಕಿತ್ಸೆ ಪ್ರಾರಂಭಿಸಿ.

ತಾಜಾ ಪದಾರ್ಥಗಳನ್ನು ಕೆಳಗೆ ಸೂಚಿಸಿರುವ ಅನುಕ್ರಮದಂತೆ ದಿನಕ್ಕೊಮ್ಮೆ ಬೆಲ್ಲ ಹಾಗೂ ಉಪ್ಪಿನೊಂದಿಗೆ ಸೇವನೆ ಮಾಡಿಸಿರಿ.

1 ಬಿಳಿ ಮೂಲಂಗಿಯನ್ನು ಪ್ರತಿದಿನದಂತೆ ಮೊದಲ 5 ದಿನಗಳವರೆಗೂ ನೀಡಿ

ಪ್ರತಿದಿನದಂತೆ 1 ಪೂರ್ತಿ ಲೋಳೆಸರದ ಎಲೆಯನ್ನು ನಂತರದ 4 ದಿನಗಳವರೆಗೂ ಸೇವನೆ ಮಾಡಿಸಿರಿ

ಪ್ರತಿದಿನದಂತೆ 4 ಹಿಡಿ ನುಗ್ಗೆ ಸೊಪ್ಪನ್ನು ನಂತರದ 4 ದಿನಗಳವರೆಗೂ ಸೇವನೆ ಮಾಡಿಸಿರಿ

ಪ್ರತಿದಿನದಂತೆ 4 ಹಿಡಿ ಮಂಗರಬಳ್ಳಿಯನ್ನು ನಂತರದ 4 ದಿನಗಳವರೆಗೂ ಸೇವನೆ ಮಾಡಿಸಿರಿ

ಪ್ರತಿದಿನದಂತೆ 4 ಹಿಡಿ ಕರಿಬೇವನ್ನು 5 ಗ್ರಾಂ ಅರಿಶಿನದ ಜೊತೆ ನಂತರದ 4 ದಿನಗಳವರೆಗೂ ಸೇವನೆ ಮಾಡಿಸಿರಿ

ಜಾನುವಾರು ಗರ್ಭಧರಿಸದಿದ್ದರೆ ಮತ್ತೆ ಈ ಚಿಕಿತ್ಸೆಯನ್ನು ಪುನಾರಾವರ್ತಿಸಿ.
ಇದರಿಂದಲೂ ಹಸುವಿಗೆ ಗರ್ಭಧಾರಣೆಯಾಗದಿದ್ದಲ್ಲಿ ಮೇಲಿನ ಚಿಕಿತ್ಸೆಯ ಕ್ರಮವನ್ನು ಮತ್ತೊಮ್ಮೆ ಮಾಡಿ

TDU

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ನೆಣೆ ಬರುವುದು ಅಥವ ಗರ್ಭ ಜಾರುವುದು




ಲೋಳೆಸರದ
ಘನವಾದ ದ್ರವ
(ಜೆಲ್)





ಅರಿಶಿನ



ಮುಟ್ಟಿದರೆ ಮುನಿ ಗಿಡದ ಎಲೆಗಳು

## ಬೇಕಾಗುವ ಪದಾರ್ಥಗಳು:

ಒಂದು ಪೂರ್ತಿಯಾದ ಲೋಳೆಸರ ಎಲೆಯಿಂದ ತೆಗೆದ ಘನ ದ್ರವ (ಜೆಲ್)

ಅರಿಶಿನ - 1 ಚಿಟಕೆ

ಮುಟ್ಟಿದರೆ ಮುನಿ ಗಿಡದ ಎಲೆಗಳು - 2 ಹಿಡಿ

## ತಯಾರಿಸುವ ವಿಧಾನ

ಒಂದು ಪೂರ್ತಿಯಾದ ಲೋಳೆಸರ ಎಲೆಯಿಂದ ಜೆಲ್ ಅಥವ ಘನವಾದ ದ್ರವ ತೆಗೆದುಕೊಳ್ಳಿ.

ಜೆಲ್ ಅಥವ ಘನವಾದ ದ್ರವದ ಅಂಟುವಿಕೆ ಕಡಿಮೆ ಆಗುವವರೆಗೆ ನೀರಿನಿಂದ ತೊಳೆಯಿರಿ.

ದ್ರವದ ಪ್ರಮಾಣ ಅೀಟರ್ನಷ್ಟು ಆಗುವವರೆಗೆ ನೀರು ಬೆರೆಸಿರಿ.

ಲೋಳೆಸರದ ಜೆಲ್ ಅಥವ ಘನವಾದ ದ್ರವಕ್ಕೆ ಒಂದು ಚಿಟಕೆ ಅರಶಿನ ಪುಡಿ ಹಾಕಿ. ಈ ಮಿಶ್ರಣ ಒಂದರ ಅರ್ಧ ಭಾಗಕ್ಕೆ ಇಳಿಯುವವರೆಗೂ ಕುದಿಸಿ ನಂತರ ತಣ್ಣಗಾಗಿಸಿ.

ಮುಟ್ಟಿದರೆ ಮುನಿ ಗಿಡದ ಎಲೆಯ ಲೇಪನೆಯನ್ನು (ಪೇಸ್ಟ್) ಪ್ರತ್ಯೇಕವಾಗಿ ತಯಾರಿಸಿಕೊಳ್ಳಿ.

## ಔಷಧಿ ನೀಡುವ ಕ್ರಮ

ಜಾರಿರುವ ಗರ್ಭವನ್ನು ಸ್ವಚ್ಛಮಾಡಿ

ಜಾರಿರುವ ಗರ್ಭದ ಮೇಲೆ ಲೋಳೆಸರದ ಜೆಲ್ ಅನ್ನು ಸಿಂಪಡಿಸಿ

ಜೆಲ್ ಒಣಗಿದ ನಂತರ ಮುಟ್ಟಿದರೆ ಮುನಿ ಗಿಡದ ಎಲೆಯ ಪೇಸ್ಟನ್ನು ಹಚ್ಚಿ

ಪರಿಸ್ಥಿತಿ ಸುಧಾರಿಸುವವರೆಗೂ ಈ ಕ್ರೀಯೆಯನ್ನು ಮಾಡುತ್ತಿರಬೇಕು


ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್.
ಕೋಡನ್ನು ಸ್ಕ್ಯಾನ್ ಮಾಡಿ

# ಕಾಲು-ಬಾಯಿ ರೋಗ


ಜೀರಿಗೆ




ಕರಿ ಮೆಣಸು


ಬೆಳ್ಳುಳ್ಳಿ


ಬೆಲ್ಲ


ಅರಿಶಿನ


ಮೆಂತ್ಯ


ತೆಂಗಿನ ಕಾಯಿ

## ಬೇಕಾಗುವ ಪದಾರ್ಥಗಳು: ಒಂದು ಸಲದ ಔಷಧಿಗೆ ಬೇಕಾದ ಪ್ರಮಾಣ

ಜೀರಿಗೆ- 10 ಗ್ರಾಂ

ಮೆಂತ್ಯ- 10 ಗ್ರಾಂ

ಕರಿ ಮೆಣಸು - 10 ಗ್ರಾಂ

ಅರಿಶಿನ- 10 ಗ್ರಾಂ

ಬೆಳ್ಳುಳ್ಳಿ-4 ಎಸಳು

ತೆಂಗಿನ ಕಾಯಿ-1

ಬೆಲ್ಲ- 120 ಗ್ರಾಂ

## ತಯಾರಿಸುವ ವಿಧಾನ

ಜೀರಿಗೆ, ಮೆಂತ್ಯ ಮತ್ತು ಕರಿ ಮೆಣಸನ್ನು ನೀರಿನಲ್ಲಿ 20-30 ನಿಮಿಷಗಳ ಕಾಲ ನೆನೆಸಿಡಿ

ಎಲ್ಲ ಪದಾರ್ಥಗಳನ್ನು ನುಣ್ಣನೆಯ ಪೇಸ್ಟಿನ ಹದಕ್ಕೆ ರುಬ್ಬಿ

ಒಂದು ತೆಂಗಿನಕಾಯಿಯನ್ನು ತುರಿದು ಪೇಸ್ಟಿನ ಜೊತೆ ಚೆನ್ನಾಗಿ ಬೆರೆಸಿ

ಪ್ರತಿಬಾರಿಯೂ ತಾಜಾವಾಗಿ ತಯಾರಿಸಿರುವ ಪೇಸ್ಟನ್ನೇ ಉಪಯೋಗಿಸಿ


## ಔಷಧಿ ನೀಡುವ ಕ್ರಮ

ಪೇಸ್ಟನ್ನು ಬಾಯಿ, ನಾಲಿಗೆ ಹಾಗೂ ಬಾಯಿಯ ಅಂಗುಳಕ್ಕೆ ಹಚ್ಚಿ

ಈ ಮಿಶ್ರಣವನ್ನು ದಿನಕ್ಕೆ ಮೂರುಬಾರಿಯಂತೆ 3-5 ದಿನಗಳವರೆಗೂ ನೀಡಿ


ವಿಡಿಯೊವನ್ನು ವೀಕ್ಷಿಸಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಕಾಲು-ಬಾಯಿ ರೋಗ- ಇತರೆ ಗಾಯಗಳು


ಕುಪ್ಪೀಗಿಡ




ಬೇವು


ಬೆಳ್ಳುಳ್ಳಿ


ಅರಿಶಿನ


ಕೊಬ್ಬರಿ ಎಣ್ಣೆ

ಅಥವಾ


ಎಳ್ಳೆಣ್ಣೆ


ಮೆಹಂದಿ


ತುಳಸಿ


ಸೀತಾಫಲ

## ಬೇಕಾಗುವ ಪದಾರ್ಥಗಳು:

ಕುಪ್ಪೀಗಿಡ- 1 ಹಿಡಿ
ಬೆಳ್ಳುಳ್ಳಿ- 10 ಎಸಳು
ಬೇವು- 1 ಹಿಡಿ
ಕೊಬ್ಬರಿ ಎಣ್ಣೆ ಅಥವಾ ಎಳ್ಳೆಣ್ಣೆ- 250 ಮಿ.ಲಿ.
ಅರಿಶಿನ- 20 ಗ್ರಾಂ
ಮೆಹಂದಿ- 1 ಹಿಡಿ
ತುಳಸಿ- 1 ಹಿಡಿ

## ತಯಾರಿಸುವ ವಿಧಾನ


ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ರುಬ್ಬಿ
500 ಮಿ.ಲಿ. ಕೊಬ್ಬರಿ ಎಣ್ಣೆ ಅಥವ ಎಳ್ಳೆಣ್ಣೆಯೊಂದಿಗೆ ಬೆರೆಸಿ, ನಂತರ ಕುದಿಸಿ, ಆನಂತರ ತಣ್ಣಗಾಗಲು ಬಿಡಿ

## ಔಷಧಿ ನೀಡುವ ಕ್ರಮ

ಗಾಯವನ್ನು ಸ್ವಚ್ಛಮಾಡಿ ಔಷದಿ ಹಚ್ಚಿ ಅಥವ ಔಷಧಿಯ ಜೊತೆಗೆ ಬ್ಯಾಂಡೇಜ್ ಮಾಡಿ
ಔಷಧಿ ಉಪಚಾರ ಮಾಡುವ ಮೊದಲನೆಯ ದಿನ, ಒಂದು ವೇಳೆ ಗಾಯದಲ್ಲಿ ಹುಳು ಕಾಣಿಸಿಕೊಂಡ್ಡಿದಲ್ಲಿ ಕರ್ಪೂರಭರಿತ ತೆಂಗಿನ ಎಣ್ಣೆ ಅಥವ ಸೀತಾಫಲದ ಸೊಪ್ಪಿನ ಪೇಷ್ಟನ್ನು ಹಚ್ಚಿ.

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಜ್ವರ




## ಬೇಕಾಗುವ ಪದಾರ್ಥಗಳು: ಒಂದು ದಿನದ ಔಷಧಿಗೆ ಬೇಕಾದ ಪ್ರಮಾಣ

ಬೆಳ್ಳುಳ್ಳಿ- 2 ಎಸಳು; ಜೀರಿಗೆ- 10 ಗ್ರಾಂ;

ತುಳಸಿ- 1 ಹಿಡಿ; ಪಲಾವ್ ಎಲೆ/ ದಾಲ್ಚಿನಿ ಎಲೆ - 10 ಗ್ರಾಂ;

ಕಾಳುಮೆಣಸು-10 ಗ್ರಾಂ; ವೀಳ್ಯದೆಲೆ- 5; ಸಾಂಬರ್ ಈರುಳ್ಳಿ - 2;

ಅರಿಶಿನ ಪುಡಿ- 10 ಗ್ರಾಂ; ಕಿರಾತ ಕಡ್ಡಿ/ ನೆಲಬೇವು- 20 ಗ್ರಾಂ;

ಕಾಮತುಳಸಿ- 1 ಹಿಡಿ; ಬೇವಿನೆಲೆ- 1 ಹಿಡಿ; ಬೆಲ್ಲ- 100 ಗ್ರಾಂ

## ತಯಾರಿಸುವ ವಿಧಾನ


ಜೀರಿಗೆ, ಕರಿ ಮೆಣಸು ಹಾಗೂ ಕೊತ್ತೊಂಬರಿ ಬೀಜಗಳನ್ನು 15 ನಿಮಿಷಗಳ ಕಾಲ ನೀರಿನಲ್ಲಿ ನೆನೆಸಿಡಿ ಮೇಲೆ ತಿಳಿಸಿದ ಎಲ್ಲಾ ಪದಾರ್ಥಗಳನ್ನು ನುಣ್ಣನೆಯ ಪೇಸ್ಟಿನಂತೆ ರುಬ್ಬಿ

## ಔಷಧಿ ನೀಡುವ ಕ್ರಮ

ಬೆಳಗ್ಗೆ ಹಾಗೂ ಸಂಜೆ ಸ್ವಲ್ಪ-ಸ್ವಲ್ಪ ಮಾತ್ರದಲ್ಲಿ, ಪೇಸ್ಟನ್ನು ಹಸುವಿಗೆ ತಿನ್ನಿಸಿ

ವಿಡಿಯೊವನ್ನು ವೀಕ್ಷಿಸಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಅತಿಸಾರ / ಭೇದಿ



ಮೆಂತ್ಯ





ಕರಿ ಮೆಣಸು



ಈರುಳ್ಳಿ




ಗಸಗಸೆ



ಜೀರಿಗೆ



ಅರಿಶಿನ



ಬೆಳ್ಳುಳ್ಳಿ



ಕರಿಬೇವು



ಬೆಲ್ಲ



ಇಂಗು

## ಬೇಕಾಗುವ ಪದಾರ್ಥಗಳು: ಒಂದು ದಿನದ ಔಷಧಿಗೆ ಬೇಕಾದ ಪ್ರಮಾಣ

ಮೆಂತ್ಯ- 10 ಗ್ರಾಂ; ಈರುಳ್ಳಿ- 1; ಬೆಳ್ಳುಳ್ಳಿ- 1 ಎಸಳು;

ಜೀರಿಗೆ- 10 ಗ್ರಾಂ; ಅರಿಶಿನ- 10 ಗ್ರಾಂ; ಕರಿಬೇವು-1 ಹಿಡಿ

ಗಸಗಸೆ- 5 ಗ್ರಾಂ; ಕರಿ ಮೆಣಸು - 10 ಗ್ರಾಂ; ಬೆಲ್ಲ- 100 ಗ್ರಾಂ; ಇಂಗು- 5 ಗ್ರಾಂ

## ತಯಾರಿಸುವ ವಿಧಾನ

ಜೀರಿಗೆ, ಇಂಗು, ಗಸಗಸೆ ಹಾಗೂ ಮೆಂತ್ಯ ವನ್ನು ಹೊಗೆ ಬರುವವರೆಗೂ (ಕಪ್ಪಾಗುವವರೆಗೆ) ಚೆನ್ನಾಗಿ ಹುರಿದುಕೊಳ್ಳಿ.

ಹುರಿದ ಪದಾರ್ಥ ತಣ್ಣಗೆಯಾದ ನಂತರ ಪುಡಿ ಮಾಡಿಕೊಳ್ಳಿ.

ಪುಡಿಯನ್ನು ಮೇಲಿನ ಇತರೆ ಪದಾರ್ಥಗಳ ಜೊತೆಗೆ ಸೇರಿಸಿ ಪೇಸ್ಟಿನಂತೆ ರುಬ್ಬಿಕೊಳ್ಳಿ.

## ಔಷಧಿ ನೀಡುವ ಕ್ರಮ

ಮಿಶ್ರಣವನ್ನು ಸಣ್ಣ ಉಂಡೆಗಳನ್ನಾಗಿ ಮಾಡಿ.

ಗುಣವಾಗುವವರೆಗೂ ಉಂಡೆಯ ಸಣ್ಣ ಪ್ರಮಾಣ ತೆಗೆದುಕೊಂಡು ದಿನಕ್ಕೆ 1 ಬಾರಿಯಂತೆ 1-3 ದಿನಗಳವರೆಗೂ ತಿನ್ನಿಸಿ.

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಹೊಟ್ಟೆ ಉಬ್ಬರ ಹಾಗೂ ಅಜೀರ್ಣತೆ




## ಬೇಕಾಗುವ ಪದಾರ್ಥಗಳು: ಒಂದು ದಿನದ ಔಷಧಿಗೆ ಬೇಕಾದ ಪ್ರಮಾಣ

ಈರುಳ್ಳಿ- 100 ಗ್ರಾಂ; ಬೆಳ್ಳುಳ್ಳಿ- 10 ಎಸಳು; ಕೆಂಪು ಒಣ ಮೆಣಸಿನಕಾಯಿ - 2

ಜೀರಿಗೆ- 10 ಗ್ರಾಂ; ಅರಿಶಿನ- 10 ಗ್ರಾಂ; ಬೆಲ್ಲ- 100 ಗ್ರಾಂ

ಮೆಣಸು- 10 ಗ್ರಾಂ; ವೀಳ್ಯದೆಲೆ- 10; ಶುಂಠಿ- 100 ಗ್ರಾಂ

## ತಯಾರಿಸುವ ವಿಧಾನ

ಮೆಣಸು ಮತ್ತು ಜೀರಿಗೆಯನ್ನು 30 ನಿಮಿಷಗಳ ಕಾಲ ನೀರಿನಲ್ಲಿ ನೆನೆಸಿ

ಉಳಿದ ಎಲ್ಲಾ ಪದಾರ್ಥಗಳ ಜೊತೆ ನುಣ್ಣಗೆ ಪೇಸ್ಟಿನಂತೆ ರುಬ್ಬಿಕೊಳ್ಳಿ

## ಔಷಧಿ ನೀಡುವ ಕ್ರಮ

ಮಿಶ್ರಣವನ್ನು ಸಣ್ಣ ಉಂಡೆಗಳನ್ನಾಗಿ ಮಾಡಿ

ಉಪ್ಪಿನ ಜೊತೆಗೆ ಸಣ್ಣ ಪ್ರಮಾಣದ ಮಿಶ್ರಣವನ್ನು ದಿನಕ್ಕೆ 3-4 ಬಾರಿಯಂತೆ 3 ದಿನಗಳವರೆಗೂ ತಿನ್ನಿಸಿ


ವಿಡಿಯೊವನ್ನು ವೀಕ್ಷಿಸಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಜಂತುಹುಳುಗಳು/ ಪರಾವಲಂಬಿ ಒಳಜೀವಿಗಳು


ಈರುಳ್ಳಿ





ಕರಿ ಮೆಣಸು


ಬೆಳ್ಳುಳ್ಳಿ



ಅರಿಶಿನ



ಸಾಸಿವೆ


ಬೇವು


ಜೀರಿಗೆ


ಬೆಲ್ಲ


ಬಾಳೆದಿಂಡು


ತುಂಬೆ


ಹಾಗಲಕಾಯಿ

## ಬೇಕಾಗುವ ಪದಾರ್ಥಗಳು: ಒಂದು ದಿನದ ಔಷಧಿಗೆ ಬೇಕಾದ ಪ್ರಮಾಣ

ಈರುಳ್ಳಿ - 1; ಬೆಳ್ಳುಳ್ಳಿ - 5 ಎಸಳು; ಸಾಸಿವೆ - 10 ಗ್ರಾಂ

ಬೇವು - 1 ಹಿಡಿ; ಜೀರಿಗೆ - 10 ಗ್ರಾಂ; ಹಾಗಲಕಾಯಿ - 50 ಗ್ರಾಂ

ಅರಿಶಿನ - 5 ಗ್ರಾಂ; ಮೆಣಸು - 5 ಗ್ರಾಂ; ಬಾಳೆದಿಂಡು - 100 ಗ್ರಾಂ

ತುಂಬೆ - 1 ಹಿಡಿ; ಬೆಲ್ಲ- 100 ಗ್ರಾಂ

## ತಯಾರಿಸುವ ವಿಧಾನ

ಮೆಣಸು, ಜೀರಿಗೆ ಹಾಗೂ ಸಾಸಿವೆಯನ್ನು 30 ನಿಮಿಷಗಳ ಕಾಲ ನೀರಿನಲ್ಲಿ ನೆನೆಸಿ

ಎಲ್ಲಾ ಪದಾರ್ಥಗಳನ್ನು ಸೇರಿಸಿ ಪೇಸ್ಟಿನಂತೆ ರುಬ್ಬಿ

## ಔಷಧಿ ನೀಡುವ ಕ್ರಮ

ಮಿಶ್ರಣವನ್ನು ಸಣ್ಣ ಉಂಡೆಗಳನ್ನಾಗಿ ಮಾಡಿ

ಉಪ್ಪಿನ ಜೊತೆಗೆ ಸಣ್ಣ ಪ್ರಮಾಣದ ಮಿಶ್ರಣವನ್ನು ದಿನಕ್ಕೆ 1 ಬಾರಿಯಂತೆ 3 ದಿನಗಳವರೆಗೂ ನೀಡಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್.
ಕೋಡನ್ನು ಸ್ಕ್ಯಾನ್ ಮಾಡಿ


# ಉಣ್ಣೆಗಳು ಮತ್ತು ಪರಾವಲಂಬಿ ಬಾಹ್ಯಜೀವಿಗಳು



ಬೆಳ್ಳುಳ್ಳಿ





ಅರಿಶಿನ


ಬೇವಿನೆಲೆ


ಲಂಟನಾ ಅಥವ ಬೇಲಿ ಗಿಡ




ಬಜೆ


ಬೇವಿನ ಹಣ್ಣು


ತುಳಸಿ

## ಬೇಕಾಗುವ ಪದಾರ್ಥಗಳು:

ಬೆಳ್ಳುಳ್ಳಿ-10 ಎಸಳು; ಬೇವಿನೆಲೆ- 1 ಹಿಡಿ; ಬೇವಿನ ಹಣ್ಣು- 1 ಹಿಡಿ/ 10

ಬಜೆ- 10 ಗ್ರಾಂ; ಅರಿಶಿನ ಪುಡಿ- 20 ಗ್ರಾಂ

ಲಂಟಾನ ಎಲೆಗಳು- 1 ಹಿಡಿ; ತುಳಸಿ- 1 ಹಿಡಿ

## ತಯಾರಿಸುವ ವಿಧಾನ

ಎಲ್ಲಾ ಪದಾರ್ಥಗಳನ್ನು ರುಬ್ಬಿ

ಒಂದು ಲೀಟರ್ ಶುದ್ಧ ನೀರನ್ನು ಬೆರೆಸಿ

ಮಿಶ್ರಣವನ್ನು ಕೋರಾ ಬಟ್ಟೆ ಅಥವಾ ಜರಡಿಯಿಂದ ಸೋಸಿಕೊಳ್ಳಿ

ಸಿಂಪಡಿಸುವ ಯಂತ್ರಕ್ಕೆ ಸೋಸಿದ ದ್ರಾವಣವನ್ನು ಹಾಕಿಕೊಳ್ಳಿ

## ಔಷಧಿ ನೀಡುವ ಕ್ರಮ

ಜಾನುವಾರುವಿನ ಸಂಪೂರ್ಣ ದೇಹಕ್ಕೆ ಸಿಂಪಡಿಸಿ

ಕೊಟ್ಟಿಗೆಯಲ್ಲಿರುವ ಬಿರುಕುಗಳಿಗೂ ಸಿಂಪಡಿಸಿ

ಮಿಶ್ರಣದ ದ್ರಾವಣವನ್ನು ಬಟ್ಟೆಯನ್ನು ಅದ್ದಿ ಸಹ ಜಾನುವಾರುವಿಗೆ ಲೇಪಿಸಬಹುದು

ಗುಣವಾಗುವವರೆಗೂ ವಾರಕ್ಕೊಮ್ಮೆ ಸಿಂಪಡಿಸಿ ಇಲ್ಲವೇ ಲೇಪಿಸಿ

ದಿನದ ಬಿಸಿಲಿರುವ ಸಮಯದಲ್ಲಿ ಮಾತ್ರ ಸಿಂಪಡಿಸಿ ಇಲ್ಲವೇ ಲೇಪಿಸಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

TDU

# ಮೈಲಿ ಗುಳ್ಳೆ/ ಚರ್ಮದ ಗಂಟು/ ಚರ್ಮ ಬಿಟ್ಟಿರುವುದು



ಬೆಳ್ಳುಳ್ಳಿ







ಬೆಣ್ಣೆ / ತುಪ್ಪ




ಅರಿಶಿನ



ಬೇವು



ಜೀರಿಗೆ



ಕಾಮಕಸ್ತೂರಿ

## ಬೇಕಾಗುವ ಪದಾರ್ಥಗಳು:

ಬೆಳ್ಳುಳ್ಳಿ- 5 ಎಸಳು

ಅರಿಶಿನ ಪುಡಿ- 10 ಗ್ರಾಂ

ಜೀರಿಗೆ- 15 ಗ್ರಾಂ

ಕಾಮಕಸ್ತೂರಿ- 1 ಹಿಡಿ

ಬೇವಿನೆಲೆ- 1 ಹಿಡಿ

ಬೆಣ್ಣೆ / ತುಪ್ಪ- 50 ಗ್ರಾಂ

## ತಯಾರಿಸುವ ವಿಧಾನ

ಜೀರಿಗೆಯನ್ನು 15 ನಿಮಿಷ ನೀರಿನಲ್ಲಿ ನೆನೆಸಿಡಿ

ಎಲ್ಲಾ ಪದಾರ್ಥಗಳನ್ನು ನುಣ್ಣನೆಯ ಪೇಸ್ಟಿನ ಹದಕ್ಕೆ ರುಬ್ಬಿ

ಅದಕ್ಕೆ ತುಪ್ಪ/ಬೆಣ್ಣೆಯನ್ನು ಹಾಕಿ ಚೆನ್ನಾಗಿ ಬೆರೆಸಿ

## ಔಷಧಿ ನೀಡುವ ಕ್ರಮ

ಬಾಧಿತ ಪ್ರದೇಶಕ್ಕೆ ಎಷ್ಟು ಬಾರಿ ಸಾಧ್ಯವೋ ಅಷ್ಟು ಬಾರಿ ಗುಣವಾಗುವವರೆಗೂ ಹಚ್ಚಿ

ಶುಚಿಗೊಳಿಸಿದ ಚರ್ಮ ಒಣಗಿದ ನಂತರವೇ ಮದ್ದನ್ನು ಹಚ್ಚಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್.
ಕೋಡನ್ನು ಸ್ಕ್ಯಾನ್ ಮಾಡಿ

# ಅಲರ್ಜಿ ಅಥವಾ ವಿಷ ಹುಳುವಿನ ಕಡಿತ





ವೀಳ್ಯದ ಎಲೆ



ಉಪ್ಪು



ಕರಿಮೆಣಸು



ಬೆಲ್ಲ

## ಬೇಕಾಗುವ ಪದಾರ್ಥಗಳು:

ಒಂದು ಸಲದ ಔಷಧಿಗೆ ಬೇಕಾದ ಪ್ರಮಾಣ
(ಈ ಔಷಧವನ್ನು ತಮಿಳು ನಾಡಿನ ಸಿದ್ಧ ಔಷಧ ತತ್ವದಲ್ಲಿ "ಮೂರು-ರಾಜರು" ಎಂದು ಕರೆಯುತ್ತಾರೆ)

ವೀಳ್ಯದ ಎಲೆ - 10 ಎಲೆಗಳು
ಕರಿಮೆಣಸು - 10 ಗ್ರಾಂ.
ಹರಳಿನ ಉಪ್ಪು - 10 ಗ್ರಾಂ.
ಬೆಲ್ಲ ಬೇಕಾಗುವಷ್ಟು

## ಔಷಧ ತಯಾರಿಸುವ ವಿಧಾನ

(i) ಮೇಲಿನ ಪದಾರ್ಥಗಳನ್ನು ಬೆರಸಿ, ರುಬ್ಬಿ ಪೇಷ್ಟನ್ನು ತಯಾರಿಸಿ
(ii) ಸಹಿ ಮಾತ್ರದಲ್ಲಿ ಬೆಲ್ಲ ಹಾಕಿ ಕಲಸಿ

## ಔಷಧೋಪಚಾರ

(i) ಔಷಧಿಯ ಸ್ವಲ್ಪ ಸ್ವಲ್ಪ ಭಾಗಮಾಡಿ ತಿನ್ನಿಸಿ
(ii) ಪ್ರತಿ ದಿನ ಮೂರು ಬಾರಿಯಂತೆ ಎರಡು ವಾರ ತಿನ್ನಿಸಿ

## ಗಮನಿಸಿ

ರೋಗ ತೀವ್ರವಾಗಿರುವ ಪರಿಸ್ಥಿತಿಯಲ್ಲಿ ಈ ಔಷಧ ತಿನ್ನಿಸುವ ಬದಲಿಗೆ, 2 ರಿಂದ 3 ಹನಿಯನ್ನು ಕಣ್ಣಿಗೆ ಪ್ರತಿ ಒಂದು ಗಂಟೆಗೆ ಒಮ್ಮೆ ಹಾಕಬಹುದು.

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಮಂಡಿ ಊತ



ಲೋಳೆಸರ





ಬೆಳ್ಳುಳ್ಳಿ




ಸುಣ್ಣ



ಅರಿಶಿನ



ಮಂಗರಬಳ್ಳಿ



ಎಳ್ಳಿನ ಎಣ್ಣೆ

## ಬೇಕಾಗುವ ಪದಾರ್ಥಗಳು:

ಲೋಳೆಸರ - 100 ಗ್ರಾಂ.

ಸುಣ್ಣ - 10 ಗ್ರಾಂ.

ಮಂಗರಬಳ್ಳಿ - 100 ಗ್ರಾಂ.

ಅರಿಶಿನ - 15 ಗ್ರಾಂ.

ಬೆಳ್ಳುಳ್ಳಿ - 5 ಎಸಳುಗಳು

ಎಳ್ಳಿನ ಎಣ್ಣೆ - 1 ಲೀಟರ್

## ತಯಾರಿಸುವ ವಿಧಾನ

ಮೇಲಿನ ಪದಾರ್ಥಗಳನ್ನು ಬೆರಸಿ, ರುಬ್ಬಿ ಪೇಷ್ಟನ್ನು ತಯಾರಿಸಿ ಒಂದು ಲೀಟರ್ ಎಳ್ಳಿನ ಎಣ್ಣೆಯಲ್ಲಿ ಕುದಿಸಿ ನಂತರ ತಣ್ಣಗಾಗಲು ಬಿಡಿ

## ಔಷಧಿ ನೀಡುವ ಕ್ರಮ

ಬಾದೆ ಇರುವ ಜಾಗಕ್ಕೆ ಪ್ರತಿದಿನ ನಾಲ್ಕು, ಐದು ಬಾರಿ ಹಚ್ಚಿ ಪ್ರತಿದಿನ, ದಿನಕ್ಕೆ ಎರಡು ಬಾರಿ ಬಿಸಿ ನೀರಿನ ಶಾಖ ಕೊಡಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಕೆಮ್ಮು


ಅಡುಸೋಗೆ




ಕರಿಮೆಣಸು


ತುಳಸಿ


ಬೆಳ್ಳುಳ್ಳಿ


ಅರಿಶಿನ


ಬೆಲ್ಲ

## ಬೇಕಾಗುವ ಪದಾರ್ಥಗಳು:

ಒಂದು ದಿನದ ಔಷಧಿಗೆ ಬೇಕಾದ ಪ್ರಮಾಣ
ಅಡುಸೋಗೆ - ಒಂದು ಎಲೆ
ತುಳಸಿ - ಒಂದು ಹಿಡಿ
ಬೆಳ್ಳುಳ್ಳಿ - 5 ಎಸಳುಗಳು
ಅರಿಶಿನ - 10 ಗ್ರಾಂ
ಕರಿಮೆಣಸು - 10 ಗ್ರಾಂ
ಬೆಲ್ಲ ಬೇಕಾಗುವಷ್ಟು

## ತಯಾರಿಸುವ ವಿಧಾನ

(i) ಕರಿಮೆಣಸನ್ನು 10-20 ನಿಮಿಷ ನೀರಿನಲ್ಲಿ ನೆನಸಿ. ಆಮೇಲೆ ಸರಿಯಾಗಿ ರುಬ್ಬಿ.
(ii) ಎಲ್ಲಾ ಪದಾರ್ಥಗಳನ್ನು ಬೆರೆಸಿ, ಅಗತ್ಯವಿದಷ್ಟು ಬೆಲ್ಲ ಹಾಕಿ ಪೇಷ್ಟನ್ನು ತಯಾರಿಸಿ

## ಔಷಧಿ ನೀಡುವ ಕ್ರಮ

ಗುಣಮುಖವಾಗುವ ವರೆಗೆ ಪ್ರತಿದಿನ 2-3 ಬಾರಿ ತಿನ್ನಿಸಿ

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್.
ಕೋಡನ್ನು ಸ್ಕ್ಯಾನ್ ಮಾಡಿ

# ಕೀಟನಾಶಕ ನಂಜು, ಹೈಡ್ರೋಜನ್ ಸಯನೈಡು ವಿಷಕಾರಿಕ, ಮೈಕೋಟಾಕ್ಸಿಕೋಸಸ್





ವೀಳ್ಯದ ಎಲೆ



ನುಗ್ಗೆ ಸೊಪ್ಪಿನ ಸಾರ



ಕರಿಮೆಣಸು



ಹುಣಸೆ ಹಣ್ಣು



ಹರಳಿನ ಉಪ್ಪು



ಬೆಲ್ಲ

## ಬೇಕಾಗುವ ಪದಾರ್ಥಗಳು

**"ಮೂರು ರಾಜರು" ಔಷಧಿ (ಒಂದು ಡೋಸು ಔಷಧಿಗೆ ಬೇಕಾದ ಪ್ರಮಾಣ)**

ವೀಳ್ಯದ ಎಲೆ - 10 ಎಲೆಗಳು
ಕರಿಮೆಣಸು - 10 ಗ್ರಾಂ
ಹರಳಿನ ಉಪ್ಪು - 10 ಗ್ರಾಂ
ಬೆಲ್ಲ - ಬೇಕಾಗುವಷ್ಟು

**ಇನ್ನೊಂದು ಬಗ್ಗೆಯ ಔಷಧಿ (ಒಂದು ದಿನದ ಔಷಧಿಗೆ ಬೇಕಾದ ಪ್ರಮಾಣ)**

ಹುಣಸೆ ಹಣ್ಣು - 1 ಕೆ.ಜಿ
ನೀರು - 1 ಲೀಟರ್
1 ಕೆಜಿ ನುಗ್ಗೆ ಸೊಪ್ಪಿನಿಂದ ತಯಾರಿಸಿದ ರಸ
ಬೆಲ್ಲ - ಬೇಕಾಗುವಷ್ಟು

## ತಯಾರಿಸುವ ವಿಧಾನ

**"ಮೂರು ರಾಜರು" ಔಷಧ ತಯಾರಿಸುವ ವಿಧಾನ**

(i) ವೀಳ್ಯದ ಎಲೆ, ಕರಿಮೆಣಸು ಹಾಗು ಕಲ್ಲುಪ್ಪು, ಇವುಗಳನ್ನು ಬೆರೆಸಿ, ರುಬ್ಬಿ ಲೇಪನ (ಪೇಷ್ಟು) ಮಾಡಿ. (ii) ಅಗತ್ಯವಿದಷ್ಟು ಬೆಲ್ಲ ಮಿಶ್ರಣ ಮಾಡಿ.

**ಇತರ ಔಷಧ ತಯಾರಿಸುವ ವಿಧಾನ**

(i) ನೀರಿನಲ್ಲಿ ಹುಣಸೆ ಹಣ್ಣಿನ ತಿರುಳನ್ನು 15 ನಿಮಿಷದವರೆಗೆ ನೆನೆ ಹಾಕಿ. (ii) ನೆನ ಹಾಕಿದ ತಿರುಳಿಂದ ರಸ ಹಿಂಡಿ (iii) ಇದಕ್ಕೆ ನೀರು, ನುಗ್ಗೆ ಸೊಪ್ಪಿನ ರಸ ಮತ್ತು ಬೆಲ್ಲ ಹಾಕಿ (iv) ಚೆನ್ನಾಗಿ ಬೆರೆಸಿ

## ಔಷಧಿ ನೀಡುವ ಕ್ರಮ

(i) ಮೇಲಿನಂತೆ ತಯಾರಿಸಿದ ಮೂರು ರಾಜರ ಔಷಧಿಯ ಮೊದಲ ಡೋಸ್ ಕೊಡಿ
(ii) ಪ್ರತಿ 2 ಗಂಟೆಗೆ ಒಮ್ಮೆ, 200 ಮಿ.ಲಿ. ಹುಣಸೆಹಣ್ಣು - ನುಗ್ಗೆ ಸೊಪ್ಪು- ಬೆಲ್ಲದಿಂದ ಮಾಡಿದ ಜಿಗುಟಾದ ಮಿಶ್ರಣವನ್ನು ತಿನ್ನಿಸಿ. (iii) 2 ಗಂಟೆಗಳ ಅಂತರದಲ್ಲಿ ಈ "ಮೂರು ರಾಜರ" ಔಷದಿಯನ್ನು ತಿನ್ನಿಸಿ

ವಿಡಿಯೊವನ್ನು ವೀಕ್ಷಿಸಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಶಾಮಕ (ಎದ್ದುನಿಲ್ಲಲು ತೊಂದರೆ)



ನಾಟಿ ಕೋಳಿಯ ಮೊಟ್ಟೆ





ಮಂಗರಬಳ್ಳಿ



ನುಗ್ಗೆ ಸೊಪ್ಪು



ಬೆಲ್ಲ

## ಬೇಕಾಗುವ ಪದಾರ್ಥಗಳು

ಒಂದು ಸಲದ (ಒಂದು ಡೋಸು) ಔಷಧಿಗೆ ಬೇಕಾದ ಪ್ರಮಾಣ

ನಾಟಿ ಕೋಳಿಯ ಮೊಟ್ಟೆ - 2

ನುಗ್ಗೆ ಸೊಪ್ಪು - 4 ಹಿಡಿ

ಮಂಗರಬಳ್ಳಿ - 4 ಹಿಡಿ

ಬೆಲ್ಲ - ಬೇಕಾಗುವಷ್ಟು

## ತಯಾರಿಸುವ ವಿಧಾನ

(i) ತಾಜಾ ಮೊಟ್ಟೆಗಳನ್ನು ತೆಗೆದುಕೊಳ್ಳಿ

(ii) ಬೇರೆ ಬೇರೆಯಾಗಿ ನುಗ್ಗೆ ಸೊಪ್ಪಿನ ಪೇಷ್ಟು ಮತ್ತು ಮಂಗರಬಳ್ಳಿಯನ್ನು ಪೇಷ್ಟನ್ನು ತಯಾರಿಸಿ. ಈ ಎರಡು ಪೇಷ್ಟಿಗೆ ಅಗತ್ಯವಿದ್ದಷ್ಟು ಬೆಲ್ಲ ಮಿಶ್ರಣ ಮಾಡಿ

## ಔಷಧಿ ನೀಡುವ ಕ್ರಮ

(i) ಒಂದು ಬಾರಿಗೆ, ಇಡಿಯಾದ ಅಂದರೆ ಸಿಪ್ಪೆ ಸಹಿತವಾಗಿ, 2 ಮೊಟ್ಟೆ ತಿನ್ನಿಸಿ. ಹೀಗೆ ದಿನಕ್ಕೆ ಮೂರು ಬಾರಿ ತಿನ್ನಿಸಿ


(ii) ಮೊಟ್ಟೆಯನ್ನು ತಿನ್ನಿಸುವ ಮೊದಲು ಅದರಲ್ಲಿ ಒಂದು ಸಣ್ಣ ತೂತು ಮಾಡಿ

(iii) ಪ್ರತಿ ಎರಡು ಗಂಟೆಗೆ ಒಮ್ಮೆ, ಒಂದಾದನಂತರ, ಮಂಗರಬಳ್ಳಿಯ ಪೇಷ್ಟು ಮತ್ತು ನುಗ್ಗೆ ಸೊಪ್ಪಿನ ಪೇಷ್ಟನ್ನು ತಿನ್ನಿಸಿ. ಒಂದು ಬಾರಿಗೆ ನಾಲ್ಕು ಹಿಡಿಯಷ್ಟು ತಿನ್ನಿಸ ಬೇಕು

(iv) ನಾಲ್ಕು ದಿನಗಳವರೆಗೆ ಜಾನುವಾರನ್ನು ಎದ್ದುನಿಲ್ಲಿಸಲು ಪ್ರಯತ್ನಿಸಬಾರದು

ವಿಡಿಯೊವನ್ನು ವೀಕ್ಷಿಸಿಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಹಾಲಿನಲ್ಲಿ ರಕ್ತ



ಕರಿಬೇವಿನ ಸೊಪ್ಪು





ಬೆಲ್ಲ



ನುಗ್ಗೆಕಾಯಿ ಸೊಪ್ಪು



ನಿಂಬೆ ಹಣ್ಣು

## ಬೇಕಾಗುವ ಪದಾರ್ಥಗಳು

ಒಂದು ದಿನದ ಔಷಧಿಗೆ ಬೇಕಾದ ಪ್ರಮಾಣ

ಕರಿಬೇವಿನ ಸೊಪ್ಪು - 2 ಹಿಡಿ

ನುಗ್ಗೆಕಾಯಿ ಸೊಪ್ಪು - 2 ಹಿಡಿ

ಬೆಲ್ಲ - 100 ಗ್ರಾಂ.

ನಿಂಬೆ ಹಣ್ಣು - 6 ಹಣ್ಣುಗಳು

## ತಯಾರಿಸುವ ವಿಧಾನ

(i) ಕರಿಬೇವಿನ ಸೊಪ್ಪು ಮತ್ತು ನುಗ್ಗೆ ಸೊಪ್ಪು ರುಬ್ಬಿ, ಬೆಲ್ಲ ಬೆರೆಸಿ ಲೇಪನೆ (ಪೇಸ್ಟ್) ತಯಾರಿಸಿ.

(ii) ಎರಡು ನಿಂಬೆ ಹಣ್ಣುಗಳನ್ನು ಅರ್ಧಕ್ಕೆ ಕತ್ತರಿಸಿರಿ

## ಔಷಧಿ ನೀಡುವ ಕ್ರಮ

(i) ಪರಿಸ್ಥಿತಿ ಸುಧಾರಣೆ ಆಗುವವರೆಗೆ ಮೇಲಿನಂತೆ ಸಿದ್ಧವಾಗಿಸಿದ ಔಷಧವನ್ನು ಪ್ರತಿದಿನ ಎರಡು ಬಾರಿ ತಿನ್ನಿಸಿ

(ii) ಒಂದು ಬಾರಿಗೆ ಎರಡು ನಿಂಬೆ ಹಣ್ಣನ್ನು (ಅರ್ಧಕ್ಕೆ ಕತ್ತರಿಸಿರುವ), ಪ್ರತಿದಿನ ಮೂರು ಬಾರಿ ತಿನ್ನಿಸಿ

(iii) ಗಮನಿಸಿ: ಇದರ ಜೊತೆಗೆ ಕೆಚ್ಚಲು ಬಾವು ರೋಗಕ್ಕೆ ಕೊಡಬೇಕಾದ ನಾಟಿ ಔಷಧವನ್ನು ಉಪಚಾರಣೆ ಮಾಡಬೇಕು

ವಿಡಿಯೊವನ್ನು ವೀಕ್ಷಿಸಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ

# ಬೆದೆಗೆ ಬಾರದಿರುವುದು




## ತಯಾರಿಸುವ ವಿಧಾನ

ಈ ಕೆಳಗೆ ಕೊಟ್ಟಿರುವ ಕ್ರಮಾನುಸಾರ ಪ್ರತಿದಿನ ಎರಡು ಬಾರಿ, ಬೆಲ್ಲ ಮತ್ತು ಉಪ್ಪಿನ ಜೊತೆ ಬೆರೆಸಿ ಪದಾರ್ಥಗಳನ್ನು ತಿನ್ನಿಸಿ

(i) ಒಂದು ಬಾರಿಗೆ ಒಂದು ಬಿಳಿ ಮೂಲಂಗಿಯನ್ನು, ಪ್ರತಿದಿನ ಎರಡು ಬಾರಿಯಂತೆ, ಐದು ದಿನಗಳವರೆಗೆ ತಿನ್ನಿಸಿ

(ii) ಒಂದು ಪೂರ್ತಿ ಲೋಳೆಸರದ ಎಲೆಯನ್ನು ಪ್ರತಿದಿನದಂತೆ ಎರಡು ಬಾರಿ, ನಂತರದ 4 ದಿನಗಳವರೆಗೂ ತಿನ್ನಿಸಿ

(iii) ನಾಲ್ಕು ಹಿಡಿ ನುಗ್ಗೆಕಾಯಿ ಸೊಪ್ಪನ್ನು ಪ್ರತಿದಿನದಂತೆ ಎರಡು ಬಾರಿ ನಂತರದ 4 ದಿನಗಳವರೆಗೂ ತಿನ್ನಿಸಿ

(iv) ನಾಲ್ಕು ಹಿಡಿ ಮಂಗರಬಳ್ಳಿಯನ್ನು ಪ್ರತಿದಿನದಂತೆ ಎರಡು ಬಾರಿ ನಂತರದ 4 ದಿನಗಳವರೆಗೂ ತಿನ್ನಿಸಿ

(v) ನಾಲ್ಕು ಹಿಡಿ ಕರಿಬೇವಿನ ಸೊಪ್ಪನ್ನು 5 ಗ್ರಾಂ ಅರಿಶಿನದ ಜೊತೆಗೆ ಪ್ರತಿದಿನದಂತೆ ಎರಡು ಬಾರಿ ನಂತರದ 4 ದಿನಗಳವರೆಗೂ ತಿನ್ನಿಸಿ

## ಗಮನಿಸಿ

ಮೇಲ್ಕಂಡ ಉಪಚಾರಣೆ ಮಾಡುವ 15 ದಿವಸದ ಮೊದಲು ಜಂತುಹುಳಗಳ ನಿರ್ವಹಣೆ ಕ್ರಮವನ್ನು ಕೈಗೊಳ್ಳ ಬೇಕು

ವಿಡಿಯೊವನ್ನು ವೀಕ್ಷಿಸಲು ಈ ಕ್ಯು. ಆರ್. ಕೋಡನ್ನು ಸ್ಕ್ಯಾನ್ ಮಾಡಿ



ಮೇಲಿನ ಸೂತ್ರಗಳನ್ನು ಪ್ರೊ. ಎನ್. ಪುಣ್ಯಮೂರ್ತಿಯವರ (profpunniya@gmail.com)
ಜಾನಪದ ಔಷಧ ಕ್ರಮಗಳ ಅರಿವು ಮತ್ತು ತಾಂತ್ರಿಕ ಸಲಹೆಯನ್ನು ಆಧಾರಿಸಿ ಸಿದ್ಧಪಡಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: anand@nddb.coop


**ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ**

**ದೂರವಾಣಿ** : 02692-260148, 260149 • **ಫ್ಯಾಕ್ಸ್** : 02692-260157

**ಜಾಲತಾಣ (ವೆಬ್‌ಸೈಟ್)**: www.nddb.coop

*facebook.com/NationalDairyDevelopmentBoard*


February, 2022

**ಇಲ್ಲಿ ಉಲ್ಲೇಖಿಸಲಾದ ಸಾಮಾನ್ಯ ಸಸ್ಯಗಳು, ಸಂಬಾರ ಮತ್ತು ಇತರ ಪದಾರ್ಥಗಳು ಸಾಮಾನ್ಯವಾಗಿ ಸುರಕ್ಷಿತವೆಂದು ಪರಿಗಣಿಸಲಾಗಿರುತ್ತದೆ.**
**ಇವುಗಳ ಪ್ರಮಾಣ ಮತ್ತು ಉಪಯೋಗಿಸುವ ಮಾಹಿತಿ ಸೂಚಿಕೆಯಷ್ಟೆ, ಸೂಕ್ತ ರೋಗನಿರ್ಣಯ ಮತ್ತು ನಿರ್ವಹಣೆಗಾಗಿ ಹತ್ತಿರದ ಪಶುವೈದ್ಯರನ್ನು ಸಂಪರ್ಕಿಸಿ.**